## ವಿಚಾರ ಸಂಕಿರಣ– ಹಾವೇರಿ ಜಿಲ್ಲೆಯಲ್ಲಿ ಒಣ ಮೆಣಸಿನಕಾಯಿಯ ಉತ್ಪಾದನೆ,ದೃಢೀಕರಣ,ಮಾರಾಟ ಹಾಗೂ ಮೌಲ್ಯವರ್ಧನೆ



ಕೃಷಿ ವ್ಯವಹಾರ ಮತ್ತು ರಫ್ತು ಜ್ಞಾನ ಕೇಂದ್ರ, ಕೃ.ವಿ.ವಿ., ಧಾರವಾಡ ಹಾಗೂ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ ಸಂಯುಕ್ತಾಶ್ರಯದಲ್ಲಿ 29.12.14 ರಂದು ಹಾವೇರಿ ಜಿಲ್ಲೆಯಲ್ಲಿ ಒಣ ಮೆಣಸಿನಕಾಯಿಯ ಉತ್ಪಾದನೆ, ದೃಢೀಕರಣ, ಮಾರಾಟ ಹಾಗೂ ಮೌಲ್ಯವರ್ಧನೆ ಕುರಿತು ಒಂದು ದಿನದ ವಿಚಾರ ಸಂಕಿರಣವನ್ನು ಕೇಂದ್ರದಲ್ಲಿ ಏರ್ಪಡಿಸಲಾಯಿತು. ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಡಾ. ಎನ್.ಆರ್. ಮಾಮಲೇದೇಸಾಯಿ, ಮುಖ್ಯಸ್ಥರು, ಕೃಷಿ ವ್ಯವಹಾರ ಮತ್ತು ರಫ್ತು ಜ್ಞಾನ ಕೇಂದ್ರ, ಕೃ.ವಿ.ವಿ., ಧಾರವಾಡರವರು ರಫ್ತಿಗಾಗಿ ಒಣ ಮೆಣಸಿನಕಾಯಿ ಬಗ್ಗೆ ಮಾತನಾಡಿದರು. ಅಧ್ಯಕ್ಷತೆಯನ್ನು ಕೇಂದ್ರದ ಹಿರಿಯ ವಿಜ್ಞಾನಿಯಾದ ಶ್ರೀ ಡಿ.ಎಸ್. ಎಂ. ಗೌಡ ಇವರು ವಹಿಸಿದ್ದರು. ಬೆಂಗಳೂರಿನ "ಫಲದಾ" ಅಗ್ರೋ ರಿಸರ್ಚ ಫೌಂಡೇಶನ್ ಪ್ರೈ.ಲಿ., ವತಿಯಿಂದ ಶ್ರೀ ಉಮೇಶ ಅಡಿಗಾ ಹಾಗೂ ಶ್ರೀ ಮಧ್ವರಾಜ ಎನ್.ಆರ್. ಇವರು ಸಾವಯವ ದೃಢೀಕರಣ ಹಾಗೂ ಒಣಮೆಣಸಿನಕಾಯಿಯ ರಫ್ತು ಹಾಗೂ ಮೌಲ್ಯವರ್ಧನೆ ಕುರಿತು ವಿವರಗಳನ್ನು ಮಂಡಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಡಾ. ಎಸ್.ಟಿ. ಪ್ರಭು, ಡಾ. ಕೆ.ಬಿ. ಯಡಹಳ್ಳಿ, ಡಾ. ಎಸ್.ಜಿ. ಅಂಗಡಿ ಇವರು ಸಸ್ಯ ಸಂರಕ್ಷಣೆ ಹಾಗೂ ಉತ್ಪಾದನೆ ಕುರಿತು ಉಪನ್ಯಾಸ ನೀಡಿದರು. ಡಾ. ಎಸ್.ಜಿ. ಅಂಗಡಿ ಇವರು ಕಾರ್ಯಕ್ರಮ ನಿರೂಪಿಸಿ ವಂದನಾರ್ಪಣೆ ಸಲ್ಲಿಸಿದರು.

## "ವಿಚಾರ ಸಂಕಿರಣ"– "ಹಾವೇರಿ ಜಿಲ್ಲೆಯಲ್ಲಿ ಮಾವಿನ ಬೆಳೆಯ ಉತ್ಪಾದನೆ, ದೃಢೀಕರಣ, ಮಾರಾಟ ಹಾಗೂ ಮೌಲ್ಯವರ್ಧನೆ



ಕೃಷಿ ವ್ಯವಹಾರ ಮತ್ತು ರಫ್ತು ಜ್ಞಾನ ಕೇಂದ್ರ, ಕೃ.ವಿ.ವಿ., ಧಾರವಾಡ ಹಾಗೂ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ ಸಂಯುಕ್ತಾಶ್ರಯದಲ್ಲಿ 30.12.2014 ರಂದು "ಹಾವೇರಿ ಜಿಲ್ಲೆಯಲ್ಲಿ ಮಾವಿನ ಬೆಳೆಯ ಉತ್ಪಾದನೆ, ದೃಢೀಕರಣ, ಮಾರಾಟ ಹಾಗೂ ಮೌಲ್ಯವರ್ಧನೆ" ಕುರಿತು ಒಂದು ದಿನದ ವಿಚಾರ ಸಂಕಿರಣವನ್ನು ಕೇಂದ್ರದಲ್ಲಿ ಏರ್ಪಡಿಸಲಾಯಿತು. ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಡಾ. ಎನ್.ಆರ್. ಮಾಮಲೇದೇಸಾಯಿ, ಮುಖ್ಯಸ್ಥರು, ಕೃಷಿ ವ್ಯವಹಾರ ಮತ್ತು ರಫ್ತು ಜ್ಞಾನ ಕೇಂದ್ರ, ಕೃ.ವಿ.ವಿ., ಧಾರವಾಡರವರು ಮಾವಿನ ಗುಣಮಟ್ಟ, ಮಹತ್ವದ ಬಗ್ಗೆ ಮಾತನಾಡಿ ಇಂತಹ ವಿಚಾರ ಸಂಕಿರಣದಲ್ಲಿ ಮಾಹಿತಿಯನ್ನು ಪಡೆದುಕೊಳ್ಳಲು ರೈತರಿಗೆ ತಿಳಿಸಿದರು.ಅಧ್ಯಕ್ಷತೆಯನ್ನು ಕಾರ್ಯಕ್ರಮ ಸಂಯೋಜಕರಾದ ಡಾ. ಸರೋಜನಿ ಕರಕಣ್ಣವರ ಇವರು ವಹಿಸಿದ್ದರು. ಬೆಂಗಳೂರಿನ "ಫಲದಾ" ಅಗ್ರೋ ರಿಸರ್ಚ ಫೌಂಡೇಶನ್ ಪ್ರೈ.ಲಿ., ವತಿಯಿಂದ ಶ್ರೀ ಉಮೇಶ ಅಡಿಗಾ ಹಾಗೂ ಶ್ರೀ ಮಧ್ವರಾಜ ಎನ್.ಆರ್. ಇವರು ಸಾವಯವ ದೃಢೀಕರಣ ಹಾಗೂ ಮಾವಿನ ರಫ್ತು ಹಾಗೂ ಮೌಲ್ಯವರ್ಧನೆ ಕುರಿತು ವಿವರಗಳನ್ನು ಮಂಡಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಡಾ. ಎಸ್.ಟಿ. ಪ್ರಭು, ಡಾ. ಕೆ.ಬಿ. ಯಡಹಳ್ಳಿ, ಡಾ. ಎಸ್.ಜಿ. ಅಂಗಡಿ ಇವರು ಸಸ್ಯ ಸಂರಕ್ಷಣೆ ಹಾಗೂ ಮಾವು ಉತ್ಪಾದನೆ ಕುರಿತು ಉಪನ್ಯಾಸ ನೀಡಿದರು. ಡಾ. ಎಸ್.ಜಿ. ಅಂಗಡಿ ಇವರು ಕಾರ್ಯಕ್ರಮ ನಿರೂಪಿಸಿ ವಂದನಾರ್ಪಣೆ ಸಲ್ಲಿಸಿದರು.


**ಪ್ರಕಾಶಕರು** **ಡಾ. ಸರೋಜನಿ ಜೆ ಕರಕಣ್ಣವರ್**
ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

ಸಂಪಾದಕರು : ಡಾ. ಎಸ್.ಎ. ಅಷ್ಟಪುತ್ರೆ
ಸಹ ಸಂಪಾದಕರು : ಶ್ರೀ. ಡಿ. ಎಸ್. ಮಲ್ಲಿಕಾರ್ಜುನಪ್ಪ ಗೌಡ
ವಿನ್ಯಾಸ : ಕು. ರೇಖಾ ಕೆ. ಎನ್.
ಅಕ್ಷರ ಜೋಡಣೆ : ಶ್ರೀಮತಿ ಸರೋಜ ತಳವಾರ


**ಆಂತರಿಕ ಪ್ರಸಾರಕ್ಕಾಗಿ ಮಾತ್ರ**

ಮುದ್ರಿತ ವಿಷಯ

ಗೆ,

ಪಿನ್ ಕೋಡ್


ಇಂದ:
**ಕಾರ್ಯಕ್ರಮ ಸಂಯೋಜಕರು**
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ-581 135
ತಾ|| ರಾಣೇಬೆನ್ನೂರು, ಜಿ|| ಹಾವೇರಿ,
ದೂರವಾಣಿ:08373-253524, 9448495338
E-mail: kvk_haveri@rediffmail.com
Website :www.kvkhaveri.org
(ನಿಮ್ಮ ಅನಿಸಿಕೆಗಳನ್ನು ಈ ವಿಳಾಸಕ್ಕೆ ಕಳುಹಿಸಿ)


Shri Bhavani, Hubli. # 94481 16253




ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ವಾರ್ತಾ ಪತ್ರಿಕೆ

ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

Website: www. kvkhaveri.org
Email:kvk_haveri@rediffmail.com

ಅಕ್ಟೋಬರ್– ಡಿಸೆಂಬರ್ 2014 ಸಂಪುಟ–12 ಸಂಚಿಕೆ–1


## ಸ್ವಚ್ಛ ಭಾರತ ಅಭಿಯಾನ






### ಸ್ವಚ್ಛತಾ ಪ್ರತಿಜ್ಞಾ ವಿಧಿ:

- ದಿನಾಂಕ 02.10.2014 ರಂದು ಬೆಳಗ್ಗೆ 9.45 ಕ್ಕೆ ಕೃಷಿ ವಿಜ್ಞಾನ ಕೇಂದ್ರದ ಹನುಮನಮಟ್ಟಿಯ ಎಲ್ಲಾ ಸಿಬ್ಬಂದಿಯು ಸ್ವಚ್ಛತಾ ಆಂದೋಲನದ ಕಾರ್ಯಕ್ರಮದ ಅಡಿಯಲ್ಲಿ ಸ್ವಚ್ಛತಾ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು.
- ಸ್ವಚ್ಛ ಭಾರತ ಅಭಿಯಾನ ಕುರಿತು ಕೇಂದ್ರದಿಂದ ಕಾಲಕಾಲಕ್ಕೆ ಕಿರು ಸಂದೇಶಗಳನ್ನು ಕಳುಹಿಸಲಾಗುತ್ತಿದೆ.
- ಸ್ವಚ್ಛ ಭಾರತ ಅಭಿಯಾನವನ್ನು ಕಛೇರಿ ಆವರಣದ ಸ್ವಚ್ಛತೆಯೊಂದಿಗೆ ಆರಂಭಿಸಲಾಯಿತು.
- ಕೇಂದ್ರದ ಎಲ್ಲಾ ಸಿಬ್ಬಂದಿ ಹಾಗೂ ಕೃಷಿ ಕಾರ್ಮಿಕರು ಕೃಷಿ ಕ್ಷೇತ್ರದಲ್ಲಿರುವ ಪಾರ್ಥೇನಿಯಂ ಕಸ ನಿರ್ಮೂಲನೆಯಲ್ಲಿ ಪಾಲ್ಗೊಂಡಿದ್ದರು.
- ರೈತರ ಹೊಲದಲ್ಲಿಯ ಕೃಷಿ ತ್ಯಾಜ್ಯ ವಸ್ತುಗಳನ್ನು ಕಾಂಪೋಸ್ಟ ಆಗಿ ಪರಿವರ್ತಿಸಿಕೊಳ್ಳಲು ಹಾಗೂ ಜೊತೆಗೆ ಕೃಷಿ ಕ್ಷೇತ್ರದ ಸ್ವಚ್ಛತೆಯನ್ನು ಕಾಪಾಡಿಕೊಳ್ಳಲು ಸ್ವಚ್ಛತಾ ಅರಿವು ತರಬೇತಿ ಕಾರ್ಯಕ್ರಮದ ಮೂಲಕ ಪ್ರಚಾರ ಮಾಡಲಾಯಿತು.
- ಕೇಂದ್ರದ ಎಲ್ಲಾ ಸಿಬ್ಬಂದಿ ವರ್ಗದವರನ್ನು ಉದ್ದೇಶಿಸಿ ಸ್ವಚ್ಛ ಭಾರತ ಅಭಿಯಾನದ ಅಡಿಯಲ್ಲಿ ತಮ್ಮ ಮನೆ, ಹೊಲ ಹಾಗೂ ಆವರಣದ ಸುತ್ತಮುತ್ತ ಸ್ವಚ್ಛತೆಯನ್ನು ಕಾಪಾಡಿಕೊಳ್ಳಲು ಕರೆನೀಡಲಾಯಿತು.

## ಶೇಂಗಾ ಬೆಳೆಯ ಕ್ಷೇತ್ರೋತ್ಸವ





ಕೇಂದ್ರದಲ್ಲಿ 13ನೇ ಅಕ್ಟೋಬರ್, 2014 ರಂದು ಶೇಂಗಾ ತಳಿ ಜಿಪಿಬಿಡಿ–4 & 5ರ ಕ್ಷೇತ್ರೋತ್ಸವ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ರಾಣೇಬೆನ್ನೂರು ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರಾದ ಡಾ. ಭಾಗವಾನ್‌ರವರು ಉದ್ಘಾಟಿಸಿ ಶೇಂಗಾ ಬೆಳೆಯಲ್ಲಿ ಕೃಷಿ ವಿಧಾನಗಳು, ಕೃಷಿ ಇಲಾಖೆಯಿಂದ ದೊರಕುವ ಸೌಲಭ್ಯಗಳು ಮತ್ತು ಶೇಂಗಾ ಬೆಳೆಯ ಬೇಸಾಯ ಕ್ರಮಗಳ ಬಗ್ಗೆ ಮಾತನಾಡಿದರು. ಡಾ. ವೀರಣ್ಣ, ಕೀಟ ಶಾಸ್ತ್ರಜ್ಞರು, ಕೃಷಿ ಮಹಾವಿದ್ಯಾಲಯ, ಹನುಮನಮಟ್ಟಿ ಇವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಶೇಂಗಾ ಬೆಳೆಯ ಇಳುವರಿ ಹೆಚ್ಚಿಸಲು ಅನುಸರಿಸಬೇಕಾದ ಕ್ರಮಗಳು ಹಾಗೂ ಕೀಟ ನಿಯಂತ್ರಣಕ್ಕಾಗಿ ಕೈಗೊಳ್ಳಬಹುದಾದ ಚಟುವಟಿಕೆಗಳನ್ನು ರೈತರಿಗೆ ತಿಳಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಕರಿಯಮ್ಮ ಅಗಸನಹಳ್ಳಿ, ಉಪಾದ್ಯಕ್ಷರು, ಗ್ರಾಮ ಪಂಚಾಯಿತಿ, ಕಜ್ಜರಿ ಇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕೃಷಿ ವಿಜ್ಞಾನ ಕೇಂದ್ರದ ಸಸ್ಯರೋಗ ಶಾಸ್ತ್ರಜ್ಞರಾದ ಡಾ. ಎಸ್.ಎ. ಅಷ್ಟಪುತ್ರೆ ಇವರು ಶೇಂಗಾ ಬೆಳೆಯ ಸಮಗ್ರ ರೋಗ ನಿರ್ವಹಣೆ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಷಯ ತಜ್ಞರಾದ ಶ್ರೀ ಮಲ್ಲಿಕಾರ್ಜುನಪ್ಪ ಗೌಡ ರವರು ಶೇಂಗಾ ಬೀಜಕ್ಕೆ ಜಿಲ್ಲೆಯಲ್ಲಿ ಅಧಿಕ ಬೇಡಿಕೆಯಿದ್ದು ಉತ್ತಮ ಗುಣಮಟ್ಟದ ಬೀಜೋತ್ಪಾದನೆ ಮಾಡುವಂತೆ ಕರೆ ನೀಡಿ ಕೇಂದ್ರದಿಂದ ದೊರೆಯುವ ತಾಂತ್ರಿಕ ಸೇವೆಗಳ ಕುರಿತು ರೈತರಿಗೆ ಅರಿವು ಮೂಡಿಸಿದರು. ಕಾರ್ಯಕ್ರಮದಲ್ಲಿ ಡಾ. ಎಸ್.ಎ. ಅಷ್ಟಪುತ್ರೆಯವರು ಸ್ವಾಗತಿಸಿ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು. ಈ ಕಾರ್ಯಕ್ರಮದಲ್ಲಿ ಕಜ್ಜರಿ, ಕಾಕೋಳ, ಬಾಡ, ಅಂಗರಗಟ್ಟಿ ಗ್ರಾಮಗಳ ರೈತರು ಮತ್ತು ಕೃಷಿ ಇಲಾಖೆಯ ಸಿಬ್ಬಂದಿ, ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಪಾಲ್ಗೊಂಡಿದ್ದರು.

## ಹತ್ತಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಕ್ಷೇತ್ರೋತ್ಸವ





ರಾಣೇಬೆನ್ನೂರು ತಾಲೂಕಿನ ಕಾಕೋಳ ಗ್ರಾಮದ ಪ್ರಗತಿಪರ ರೈತರಾದ ಶ್ರೀ ಶಿವಕುಮಾರ ಶಿಡಗನಾಳ ಇವರ ಕ್ಷೇತ್ರದಲ್ಲಿ 16ನೇ ಅಕ್ಟೋಬರ್, 2014 ರಂದು ಹತ್ತಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಕ್ಷೇತ್ರೋತ್ಸವ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಶ್ರೀಮತಿ ಗಂಗವ್ವ ಬೀರಪ್ಪ ಅಗಸನಹಳ್ಳಿ, ಉಪಾಧ್ಯಕ್ಷರು, ಗ್ರಾಮ ಪಂಚಾಯತಿ, ಕಾಕೋಳ ಉದ್ಘಾಟಿಸಿದರು. ಶ್ರೀ ಚನ್ನಬಸಪ್ಪ ಕೊಂಬಳಿ, ಅಧ್ಯಕ್ಷರು, ದೇಸಿ ಕೃಷಿಕರ ಬಳಗ, ಕಾಕೋಳ ಇವರು ಅತಿಥಿಗಳಾಗಿ ಭಾಗವಹಿಸಿ ಕೃಷಿಯಲ್ಲಿ ಇತ್ತೀಚಿನ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಇಳುವರಿಯನ್ನು ಹೆಚ್ಚಿಸಿಕೊಳ್ಳಲು ಕರೆನೀಡಿದರು. ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಪಾಲ್ಗೊಂಡ ಕೃಷಿ ಮಹಾವಿದ್ಯಾಲಯ, ಹನುಮನಮಟ್ಟಿಯ ಬೇಸಾಯ ಶಾಸ್ತ್ರಜ್ಞರಾದ ಡಾ. ಅರ್ಜುನ ಶರ್ಮಾ ಇವರು ಹತ್ತಿಯಲ್ಲಿಯ ವಿವಿಧ ಬೇಸಾಯ ಕ್ರಮಗಳ ಬಗ್ಗೆ ಸವಿಸ್ತಾರವಾಗಿ ಮಾಹಿತಿ ಒದಗಿಸಿದರು ಹಾಗೂ ಕೀಟಶಾಸ್ತ್ರಜ್ಞರಾದ ಡಾ. ವೀರಣ್ಣ ಇವರು ಹತ್ತಿಯಲ್ಲಿ ಕೀಟಗಳ ಸಮರ್ಪಕ ನಿರ್ವಹಣೆಯಿಂದ ಇಳುವರಿ ಹೆಚ್ಚಿಸಲು ಸಾಧ್ಯ ಎಂದು ತಿಳಿಸಿಕೊಟ್ಟರು. ಕೇಂದ್ರದ ಸಸ್ಯರೋಗ ತಜ್ಞರಾದ ಡಾ. ಎಸ್.ಎ. ಅಷ್ಟಪುತ್ರೆಯವರು ಹತ್ತಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಹಾಗೂ ರೋಗಗಳ ನಿಯಂತ್ರಣದ ಬಗ್ಗೆ ಅರಿವು ಮೂಡಿಸಿದರು.ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೇಂದ್ರದ ಮುಖ್ಯಸ್ಥರಾದ ಡಾ. ಸರೋಜನಿ ಕರಕಣ್ಣವರ ಇವರು ಪ್ರಾತ್ಯಕ್ಷಿಕೆಯ ಉಪಯುಕ್ತತೆ ಬಗ್ಗೆ ಮಾತನಾಡಿ ಕೇಂದ್ರದಿಂದ ದೊರೆಯುವ ತಾಂತ್ರಿಕ ಸೇವೆಗಳ ಕುರಿತು ರೈತರಿಗೆ ಅರಿವು ಮೂಡಿಸಿದರು. ವಿಶ್ವ ಆಹಾರ ದಿನಾಚರಣೆ ಅಂಗವಾಗಿ ಆಹಾರ ಮತ್ತು ಪೋಷಕಾಂಶಗಳ ಮಹತ್ವವನ್ನು ಅಧ್ಯಕ್ಷರು ತಿಳಿಸಿಕೊಟ್ಟರು. ಕಾರ್ಯಕ್ರಮದಲ್ಲಿ ಡಾ. ಎಸ್.ಎ. ಅಷ್ಟಪುತ್ರೆಯವರು ಸ್ವಾಗತಿಸಿ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

## ತೆಂಗಿನ ಮರ ಹತ್ತಿ ಕಾಯಿ ಕೀಳುವ ಮತ್ತು ಸಸ್ಯ ಸಂರಕ್ಷಣೆ ಕುರಿತು ವೃತ್ತಿಪರ ತರಬೇತಿ









ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ಹಾಗೂ ಕೇಂದ್ರ ಸರಕಾರದ ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಹಾವೇರಿ ಜಿಲ್ಲೆಯಲ್ಲಿ ಸ್ವ-ಉದ್ಯೋಗ ಕೈಗೊಳ್ಳಬೇಕೆಂಬ ಆಸಕ್ತ ಯುವಕರಿಗೆ ಉಪಕರಣವನ್ನು ಬಳಸಿ ತೆಂಗಿನ ಮರ ಹತ್ತಿ ಕಾಯಿ ಕೀಳುವ ಮತ್ತು ಸಸ್ಯ ಸಂರಕ್ಷಣೆ ಕುರಿತಂತೆ ಆರು ದಿನಗಳ ತರಬೇತಿಯನ್ನು ದಿನಾಂಕ: 22.11.2014 ರಿಂದ 27.11.2014 ರವರೆಗೆ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ 40 ಆಸಕ್ತ ಯುವಕರು 2 ಗುಂಪಿನಲ್ಲಿ ಪಾಲ್ಗೊಂಡು ಉಪಕರಣದ ಸಹಾಯದಿಂದ ತೆಂಗಿನ ಮರ ಹತ್ತುವ ತರಬೇತಿಯನ್ನು ನುರಿತ ತರಬೇತಿದಾರರಿಂದ ಪಡೆದುಕೊಂಡರು. ತರಬೇತಿ ಕಾರ್ಯಕ್ರಮವನ್ನು ಡಾ. ಸರೋಜನಿ ಕರಕಣ್ಣವರ, ಕಾರ್ಯಕ್ರಮ ಸಂಯೋಜಕರು ಆಯೋಜಿಸಿದ್ದರು. ಶ್ರೀ ಡಿ.ಎಸ್. ಮಲ್ಲಿಕಾರ್ಜುನಪ್ಪ ಗೌಡ ಮತ್ತು ಡಾ. ಎಸ್.ಎ. ಅಷ್ಟಪುತ್ರೆ, ವಿಜ್ಞಾನಿಗಳು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ಇವರು ತರಬೇತಿಯ ನೇತೃತ್ವ ವಹಿಸಿದ್ದರು.

## ಪಶುಸಂಗೋಪನಾ ಇಲಾಖೆಯ ಅರೆತಾಂತ್ರಿಕ ಸಿಬ್ಬಂದಿಗೆ ತಾಂತ್ರಿಕ ಕಾರ್ಯಾಗಾರ





ಕೇಂದ್ರದಲ್ಲಿ 12.12.2014ರಂದು ಜಿಲ್ಲೆಯ ಪಶು ಸಂಗೋಪನಾ ಇಲಾಖೆ ಹಾಗೂ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ ಸಂಯುಕ್ತ ಆಶ್ರಯದಲ್ಲಿ ಪಶುಪಾಲನಾ ಇಲಾಖೆಯ ಜಾನುವಾರು ಅಧಿಕಾರಿ, ಪಶು ಪರೀಕ್ಷಕರು ಹಾಗೂ ಪಶು ವೈದ್ಯಕೀಯ ಸಹಾಯಕರಿಗೆ ಒಂದು ದಿನದ ಅರೆತಾಂತ್ರಿಕ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಡಾ. ಸರೋಜನಿ ಕರಕಣ್ಣವರ ಇವರು ಪಶುಸಂಗೋಪನಾ ಇಲಾಖೆಯ ಅರೆತಾಂತ್ರಿಕ ಸಿಬ್ಬಂದಿಯು ಹೆಚ್ಚು ಆಧುನಿಕ ಮಾಹಿತಿಯನ್ನು ಇಂತಹ ಕಾರ್ಯಾಗಾರದಲ್ಲಿ ಅರಿತುಕೊಂಡು ರೈತರಿಗೆ ಹೆಚ್ಚಿನ ಪ್ರಯೋಜನವನ್ನು ನೀಡಿದಲ್ಲಿ ರೈತರಿಗೆ ಹೆಚ್ಚಿನ ಆರ್ಥಿಕ ಅನುಕೂಲತೆಯಾಗುತ್ತದೆ ಎಂದು ತಿಳಿಸಿದರು. ಮುಖ್ಯ ಅತಿಥಿಗಳಾದ ಶ್ರೀ ಡಿ.ಎಸ್.ಎಂ. ಗೌಡರವರು ಸಮಗ್ರ ಕೃಷಿಯಲ್ಲಿ ಕುರಿ ಸಾಕಾಣಿಕೆ ಪದ್ಧತಿ ಅಳವಡಿಸಿಕೊಳ್ಳಲು ರೈತರಿಗೆ ಕರೆ ನೀಡಿದರು ಜಿಲ್ಲೆಯ ಪಶುಪಾಲನೆ ಇಲಾಖೆಯ ಸುಮಾರು 110 ಅರೆತಾಂತ್ರಿಕ ಸಿಬ್ಬಂದಿಗಳು ಭಾಗವಹಿಸಿದ್ದರು.



## ವಿಚಾರ ಸಂಕಿರಣ-ಸಿರಿ ಧಾನ್ಯಗಳ ಉತ್ಪಾದನೆ, ಸಂಸ್ಕರಣೆ ಮತ್ತು ಮೌಲ್ಯವರ್ಧನೆ







ಕೇಂದ್ರದಲ್ಲಿ 16.12.2014ರಂದು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸಿರಿಧಾನ್ಯ ಉತ್ಪಾದನೆ, ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕೃಷಿ ಮಹಾವಿದ್ಯಾಲಯ, ಹನುಮನಮಟ್ಟಿಯ ಡೀನ್‌ರವರಾದ ಡಾ. ವ್ಹಿ.ಐ. ಬೆಣಗಿಯವರು ಆರೋಗ್ಯದಲ್ಲಿ ಸಿರಿಧಾನ್ಯಗಳ ಮಹತ್ವದ ಬಗ್ಗೆ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಪ್ರಗತಿಪರ ರೈತರಾದ ಶ್ರೀ ಜಯದೇವ ಅಗಡಿ, ಕುನ್ನೂರು, ಶ್ರೀ ಚನ್ನಬಸಪ್ಪ ಕೊಂಬಳಿ, ಕಾಕೋಳ ಮತ್ತು ಗ್ರಾಮೀಣ ಗೃಹವಿಜ್ಞಾನ ಮಹಾವಿದ್ಯಾಲಯ, ಧಾರವಾಡದವರಾದ ಡಾ. ನಿರ್ಮಲಾ ಏಣಗಿ ಇವರು ಸಿರಿಧಾನ್ಯಗಳ ಉತ್ಪಾದನೆ ಮತ್ತು ಮೌಲ್ಯವರ್ಧನೆ ಕುರಿತು ಸವಿಸ್ತಾರವಾಗಿ ಮಾತನಾಡಿದರು. ಅಧ್ಯಕ್ಷತೆಯನ್ನು ಕಾರ್ಯಕ್ರಮ ಸಂಯೋಜಕರಾದ ಡಾ. ಸರೋಜನಿ ಕರಕಣ್ಣವರ ಇವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಶ್ರೀ ಮಂಜುನಾಥ, ಶ್ರೀಮತಿ ಆಂಥೋನಿ ಗ್ಲೋರಿ, ಶ್ರೀಮತಿ ಶಾಂತಾ ತಳವಾರ, ಡಾ. ಜಿ. ಶಾಂತಕುಮಾರ, ಡಾ. ನಾಗಪ್ಪ ಹರಿಜನ, ಶ್ರೀ ಡಿ.ಎಸ್.ಎಂ. ಗೌಡ ಮತ್ತು ಡಾ. ಎಸ್.ಎ. ಅಷ್ಟಪುತ್ರೆ ಇವರು ವಿವಿಧ ವಿಷಯಗಳ ಕುರಿತು ಉಪನ್ಯಾಸ ನೀಡಿದರು. ಶ್ರೀ ಡಿ.ಎಸ್.ಎಂ. ಗೌಡ ಇವರು ಸ್ವಾಗತಿಸಿದರು. ಡಾ. ಎಸ್.ಎ. ಅಷ್ಟಪುತ್ರೆ ಇವರು ಕಾರ್ಯಕ್ರಮ ನಿರೂಪಿಸಿ ವಂದನಾರ್ಪಣೆ ಸಲ್ಲಿಸಿದರು. ಈ ನಿಮಿತ್ತ ವಸ್ತು ಪ್ರದರ್ಶನ ಕೂಡ ಏರ್ಪಡಿಸಲಾಗಿತ್ತು.

## "ಸಸ್ಯ ತಳಿಗಳ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆ 2001" ಕುರಿತು ರೈತರಿಗೆ ಅರಿವು ಕಾರ್ಯಕ್ರಮ







ಕೇಂದ್ರದಲ್ಲಿ 18.12.2014 ರಂದು ಸಸ್ಯ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರ, ನವದೆಹಲಿ ಇವರ ಸಂಯುಕ್ತ ಆಶ್ರಯದಲ್ಲಿ "ಸಸ್ಯ ತಳಿಗಳ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆ 2001" ಕುರಿತು ರೈತರಿಗೆ ಅರಿವು ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕೃಷಿ ವಿಶ್ವವಿದ್ಯಾಲಯ, ಧಾರವಾಡದ ವಿಸ್ತರಣಾ ನಿರ್ದೇಶಕರಾದ ಡಾ. ಎಂ. ಬಿ. ಚಟ್ಟಿಯವರು ಕಾಯ್ದೆಯ ಸಮಗ್ರ ಮಾಹಿತಿ ನೀಡಿದರು. ಕೃಷಿ ಮಹಾವಿದ್ಯಾಲಯ, ಹನುಮನಮಟ್ಟಿಯ ಡೀನ್‌ರವರಾದ ಡಾ. ವ್ಹಿ. ಐ. ಬೆಣಗಿಯವರು ಸಸ್ಯ ತಳಿ ಸಂರಕ್ಷಣೆ ಮಾಹಿತಿ ಕೈಪಿಡಿ ಬಿಡುಗಡೆ ಮಾಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾ. ಕೆ. ವಿ. ನಾಟೀಕರ, ಸಹ ವಿಸ್ತರಣಾ ನಿರ್ದೇಶಕರು, ಕೃ.ವಿ.ವಿ., ಧಾರವಾಡ ಪ್ರಗತಿಪರ ರೈತರಾದ ಶ್ರೀ ಚನ್ನಬಸಪ್ಪ ಕೊಂಬಳಿ, ಕಾಕೋಳ ಸ್ವದೇಶಿ ತಳಿಗಳ ಸಂರಕ್ಷಣೆ ಮತ್ತು ಕೃಷಿ ತಾಂತ್ರಿಕತೆ ಕುರಿತು ಸವಿಸ್ತಾರವಾಗಿ ಮಾತನಾಡಿದರು. ಅಧ್ಯಕ್ಷತೆಯನ್ನು ಕಾರ್ಯಕ್ರಮ ಸಂಯೋಜಕರಾದ ಡಾ. ಸರೋಜನಿ ಕರಕಣ್ಣವರ ಇವರು ವಹಿಸಿದ್ದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಡಾ. ಕಾವೇರಾ ಬಿರಾದಾರ, ಡಾ. ಜೆ. ಎಸ್. ಹಿಳ್ಳಿ, ಡಾ. ಜಿ. ಶಾಂತಕುಮಾರ, ಡಾ. ಸಿ. ಸುಮಾ ಮೊಗಳಿ, ಡಾ. ನಾಗಪ್ಪ ಹರಿಜನ, ಶ್ರೀ ಚನ್ನಬಸಪ್ಪ ಕೊಂಬಳಿ, ಇವರು ವಿವಿಧ ವಿಷಯಗಳ ಕುರಿತು ಉಪನ್ಯಾಸ ನೀಡಿದರು. ಡಾ. ಎಸ್.ಎ. ಅಷ್ಟಪುತ್ರೆ ಇವರು ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಡಿ.ಎಸ್.ಎಂ. ಗೌಡ ಇವರು ವಂದನಾರ್ಪಣೆ ಸಲ್ಲಿಸಿದರು. ಜಿಲ್ಲೆಯ ವಿವಿಧ ಗ್ರಾಮಗಳಿಂದ ಸುಮಾರು 150 ರೈತ/ರೈತಮಹಿಳೆಯರು ಭಾಗವಹಿಸಿದ್ದರು